# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 528
ಸದಸ್ಯರ ಹೆಸರು : ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 13.12.2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

**********

| | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ರೈತರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗದ ಕಾರಣ ಬೆಳೆಗಳು ಒಣಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | ಬೀದರ್ ಜಿಲ್ಲೆಯ ರೈತರಿಗೆ ಸಮರ್ಪಕ ವಿದ್ಯುತ ಪೂರೈಕೆಯಾಗದ ಕಾರಣ ಬೆಳೆಗಳು ಒಣಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ) | ಬೀದರ ಜಿಲ್ಲೆಯಲ್ಲಿ ರೈತರ ಜಮೀನುಗಳಿಗೆ ನೀರು ಬಿಡಲು ಇಲಾಖೆಯಿಂದ ಎಷ್ಟು ಗಂಟೆಗಳ ಕಾಲ ವಿದ್ಯುತ್ ನೀಡಲಾಗುತ್ತಿದೆ ಹಾಗೂ ಜಿಲ್ಲೆಯ ರೈತರ ಹೊಲಗಳಲ್ಲಿರುವ ಟ್ರಾನ್ಸ್‌ಫಾರ್ಮರಗಳು ಕೆಟ್ಟು ಹೋದಲ್ಲಿ ಅಳವಡಿಸಲು ವಿಳಂಬವಾಗುತ್ತಿರಲು ಕಾರಣಗಳೇನು; (ವಿವರ ನೀಡುವುದು) | ಬೀದರ್ ಜಿಲ್ಲೆಯ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಘೋಷಿತ ಅವಧಿಯಂತೆ ದಿನವಹಿ 7 ಗಂಟೆಗಳ 3 ಫೇಸ್ ವಿದ್ಯುತ್ ಪೂರೈಸಲಾಗುತ್ತಿದೆ.<br><br>ಕೆ.ಇ.ಆರ್.ಸಿ. ನಿಯಮಾವಳಿಗಳನ್ವಯ ಗ್ರಾಮೀಣ ಪ್ರದೇಶಗಳಲ್ಲಿ ವಿಫಲಗೊಳ್ಳುವ ಪರಿವರ್ತಕಗಳನ್ನು 72 ಗಂಟೆಯೊಳಗೆ ಬದಲಾಯಿಸಲು ಕ್ರಮ ವಹಿಸಲಾಗಿದೆ. ಕೆಲವೊಮ್ಮೆ ಗ್ರಾಹಕರಿಂದ ಪರಿವರ್ತಕ ವಿಫಲವಾದ ಬಗ್ಗೆ ಮಾಹಿತಿ ನೀಡುವಲ್ಲಿ ವಿಳಂಬವಾದಾಗ, ವಿಫಲ ಪರಿವರ್ತಕ ಬದಲಾಯಿಸುವ ಕಾರ್ಯವು ವಿಳಂಬವಾಗಿರುತ್ತದೆ. |
| ಇ) | ಬೀದರ ಜಿಲ್ಲೆಯಲ್ಲಿ ವಿವಿಧ ಕಡೆಯಲ್ಲಿ ವಿದ್ಯುತ್ ಕಂಬಗಳು ಬೀಳುವ ಹಂತದಲ್ಲಿದ್ದು, ತಂತಿಗಳು ಜೋಲಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | • ಜೆಸ್ಕಾಂ ಕಂಪನಿ ವ್ಯಾಪ್ತಿಯ ಬೀದರ ಜಿಲ್ಲೆಯಾದ್ಯಂತ ಆಗಿಂದಾಗ್ಗೆ ಸ್ಥಳ ಪರಿಶೀಲನೆ ಮಾಡುವ ಮೂಲಕ ವಾಲಿರುವ ಕಂಬಗಳು ಹಾಗೂ ಸಡಿಲಗೊಂಡ ವಿದ್ಯುತ್ ಮಾರ್ಗಗಳನ್ನು ಗುರುತಿಸಿ, ಸರಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಪ್ರಸಕ್ತ ಸಾಲಿನಲ್ಲಿ ನವೆಂಬರ್–2018 ರವರೆಗೆ, ವಾಲಿರುವ ಕಂಬಗಳನ್ನು ಸರಿಪಡಿಸಲು ಹಾಗು ಸಡಿಲಗೊಂಡ ವಿದ್ಯುತ್ ಲೈನನ್ನು ಬಿಗಿಗೊಳಿಸಲು ಒಟ್ಟು 145 ಕಾಮಗಾರಿಗಳಿಗೆ ಕಾರ್ಯದೇಶ ನೀಡಲಾಗಿರುತ್ತದೆ.<br>• ಈ ಪೈಕಿ, 130 ಕಾಮಗಾರಿಗಳು ಪೂರ್ಣಗೊಂಡಿದ್ದು, 11 ಕಾಮಗಾರಿಗಳ ಅನುಷ್ಠಾನ ಕಾರ್ಯವು ಪ್ರಗತಿಯಲ್ಲಿವೆ. ಉಳಿದ 4 ಕಾಮಗಾರಿಗಳ ಅನುಷ್ಠಾನ ಕಾರ್ಯವನ್ನು ಕೈಗೆತ್ತಿಕೊಳ್ಳಲು ಬಾಕಿಯಿದೆ.<br>• 2018–19 ನೇ ಸಾಲಿನ ನವೆಂಬರ್–18ರ ಅಂತ್ಯಕ್ಕೆ ಒಟ್ಟು 889 ವಾಲಿರುವ ಕಂಬಗಳನ್ನು ಸರಿಪಡಿಸಲಾಗಿದ್ದು, 147 ಕಿ.ಮೀ ತಂತಿ/ ವಿದ್ಯುತ್ ವಾಹಕ ಮಾರ್ಗವನ್ನು ಬಿಗಿಗೊಳಿಸಿ ಸರಿಪಡಿಸಲಾಗಿದೆ. |

**ಸಂಖ್ಯೆ: ಇಎನ್ 234 ಇಬಿಎಸ್ 2018**

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ